- -

**ಓ.ಎಸ್. ಸಂಖ್ಯೆ: 203 /2015**

**ಪಿ.ಡಬ್ಲ್ಯೂ: 4**

ದಿನಾಂಕ: 12.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. ಈ ದಾವೆ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತಿರ್ಣ ಗೊತ್ತಿಲ್ಲ. ಇದರ ಚೆಕ್ಕು ಬಂದಿ ಗೊತ್ತು, ಪೂರ್ವಕ್ಕೆ:- ಜಂಬಣ್ಣರವರ ಜಮೀನು, ಪಶ್ಚಿಮಕ್ಕೆ: ಗುಡ್ಡ, ಉತ್ತರಕ್ಕೆ: ಜಂಬಣ್ಣ ರವರ ಜಮೀನು, ದಕ್ಷಿಣಕ್ಕೆ: ಹಳ್ಳ ಇರುತ್ತದೆ. ದಾವಾ ಆಸ್ತಿಯ ಪಹಣಿ ಪತ್ರಗಳನ್ನು ನಾನು ನೋಡಿರುವುದಿಲ್ಲ.

ಸುಮಾರು 25-30 ವರ್ಷಗಳಿಂದ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು 1 ನೇ ಪ್ರತಿವಾದಿಯ ಹೆಸರಿಗೆ ಇರುವ ವಿಚಾರ ಗೊತ್ತಿಲ್ಲ. 1 ನೇ ಪ್ರತಿವಾದಿಯು ಮುರುಸಾಣಿ ಮಾರಯ್ಯ, ಮುರುಸಾಣಿ ಪಕೀರಯ್ಯ ಮತ್ತು ಮುರುಸಾಣಿ ಮಲ್ಲಯ್ಯರವರ ವಿರುದ್ಧ ದಾವಾ ಸಂಖ್ಯೆ 104/2015 ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆ 1 ನೇ ಪ್ರತಿವಾದಿ ಪರವಾಗಿ ಡಿಕ್ರಿ ಆದ ವಿಚಾರ ಗೊತ್ತಿಲ್ಲ. ದಾವಾ ಆಸ್ತಿಯು ಸುಮಾರು 40 ವರ್ಷಗಳಿಂದ 1 ನೇ ಪ್ರತಿವಾದಿಯ ಗಂಡ ಪಂಪಣ್ಣ, ನಂತರ 1 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಕ್ಕದಲ್ಲಿ ನನ್ನ ಜಮೀನು ಇರುವುದಿಲ್ಲ ನನ್ನ ಅಣ್ಣ ತಮ್ಮಂದರ ಜಮೀನು ಇರುತ್ತದೆ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**